ನಿಮ್ಮ ಹೃದಯಭಾಗದಲ್ಲಿ ಪ್ರಕಾಶಮಾನವಾದ ಬೆಳಕು ಇದೆಯೆಂದು ಭಾವಿಸಿಕೊಳ್ಳಿ. ಅಂತೆಯೇ ನಿಮ್ಮ ದೇಹವು ಪಾರದರ್ಶಕವಾಗಿದೆಯೆಂದು ಕಲ್ಪಿಸಿಕೊಳ್ಳಿ. ನಿಮ್ಮ ದೇಹದೊಳಗೆ ಕಾಣುತ್ತಿರುವ ಬೆಳಕು ನಿಸ್ವಾರ್ಥ ಪ್ರೇಮದ ಬೆಳಕು. ಇದು ಎಲ್ಲೆಡೆಗೂ ಹರಡಿ ಪ್ರಪಂಚದ ಎಲ್ಲರನ್ನೂ ಅದು ಸಂತೋಷಗೊಳಿಸುತ್ತಿರುವುದಾಗಿ ಕಲ್ಪಿಸಿಕೊಳ್ಳಿ. ***ಮೂರನೆಯ ಹಂತ :*** ಕಣ್ಣುಗಳನ್ನು ಮುಚ್ಚಿ. ನಿಮ್ಮ ತಲೆಯ ಕೆಲವೇ ಇಂಚುಗಳ ಮೇಲ್ಭಾಗದಲ್ಲಿ ಒಂದು ಕಮಲದ ಹೂವು ಇರುವಂತೆ ಭಾವಿಸಿ. ಒಳ್ಳೆಯ ಮೌಲ್ಯಗಳು ಅದರ ನಡುವಿನ ಭಾಗವೆಂದೂ, ಜ್ಞಾನವು ಅದರ ಕಾಂಡವೆಂದೂ ಭಾವಿಸಿ. ಯೋಗಿಯ ಎಂಟು ಅತೀಂದ್ರಿಯ ಶಕ್ತಿಗಳು ಅದರ ಎಂಟು ದಳಗಳಾಗಿರಲಿ. ತ್ಯಾಗವೇ ಅದರ ಕೇಸರ ಮತ್ತು ಶಲಾಕೆಗಳು. ಯೋಗಿಯು ಬಾಹ್ಯ ಶಕ್ತಿಗಳನ್ನು ಧಿಕ್ಕರಿಸಿದರೆ ಮುಕ್ತಿಗೆ ಹತ್ತಿರವಾಗುತ್ತಾನೆ. ಆದ್ದರಿಂದ ಕಮಲದ ಎಂಟು ದಳಗಳು ಎಂಟು ಶಕ್ತಿಗಳು. ಆದರೆ ಒಳಗಿನ ಕೇಸರ ಮತ್ತು ಶಲಾಕೆಗಳು ತ್ಯಾಗದ ಶ್ರೇಷ್ಠ ಅವಸ್ಥೆಯನ್ನು ಸೂಚಿಸುತ್ತವೆ. ಈ ಎಲ್ಲ ಶಕ್ತಿಗಳ ತ್ಯಾಗವೇ ಶ್ರೇಷ್ಠ ತ್ಯಾಗವೆಂದು ಪರಿಗಣಿಸಲ್ಪಡುತ್ತದೆ. ಕಮಲದ ಒಳಗೆ ವಿರಾಜಮಾನನಾಗಿರುವ ಭಗವಂತನು ಬಂಗಾರದ ಬಣ್ಣದವನೂ, ಸುಸ್ಪಷ್ಟನೂ, ಓಂಕಾರಸ್ವರೂಪಿಯೂ, ವರ್ಣನಾತೀತನೂ ಮತ್ತು ಪ್ರಕಾಶವಾದ ಬೆಳಕಿನಿಂದ ಆವೃತನೂ ಆಗಿದ್ದಾನೆ. ಅವನನ್ನು ಕುರಿತು ಧ್ಯಾನ ಮಾಡಿ. ***ನಾಲ್ಕನೆಯ ಹಂತ :*** ಕಣ್ಣುಗಳನ್ನು ಮುಚ್ಚಿ. ನಿಮ್ಮ ಹೃದಯದಲ್ಲಿ ಒಂದು ಭಾಗವನ್ನು ಊಹಿಸಿಕೊಳ್ಳಿ. ಅದರ ಮಧ್ಯಭಾಗದಲ್ಲಿ ಸದಾ ಉರಿಯುತ್ತಿರುವ ಜ್ವಾಲೆ ಇದೆಯೆಂದು ಭಾವಿಸಿ. ಆ ಜ್ವಾಲೆಯೇ ನಿಮ್ಮ 'ಆತ್ಮ'ವೆಂದುಕೊಳ್ಳಿ. ಆ ಆತ್ಮದ ಅಂತರಂಗದಲ್ಲಿ ಇನ್ನೊಂದು ಬೆಳಕು ಇದೆ. ಅದೇ ನಿಮ್ಮ ಆತ್ಮದ ಆತ್ಮನಾದ ಭಗವಂತ. ಅವನನ್ನು ನಿಮ್ಮ ಹೃದಯದೊಳಗೆ ಸ್ಥಾಪಿಸಿಕೊಂಡು, ಧ್ಯಾನ ಮಾಡಿ.

**ಭಕ್ತಿಯೋಗದ ಪ್ರಕಾರ ಧ್ಯಾನ:** ಕಣ್ಣನ್ನು ಮುಚ್ಚಿ. ದೇವರ ಮುಂದೆ ಕುಳಿತಿರುವಂತೆ ಭಾವಿಸಿ. ಆ ದೇವಪುರುಷನ ದೇಹದಿಂದ ಹಿತವಾದ ಬೆಳಕು ಹೊರಹೊಮ್ಮುತ್ತಿರುವಂತೆ ಭಾವಿಸಿ. ಆ ದೇವನ ಸ್ಪಷ್ಟ ರೂಪವನ್ನು ಊಹಿಸಿಕೊಳ್ಳಿ. ಎಣೆಯಿಲ್ಲದ ಪ್ರೀತಿ ಮತ್ತು ಕರುಣೆಯ ಮೂರ್ತರೂಪನನ್ನಾಗಿ ಆತನನ್ನು ಪರಿಭಾವಿಸಿ. ಈ ಅಪರಿಮಿತ ಪ್ರೀತಿಯನ್ನು ಪಡೆಯುತ್ತಿರುವ ಅವನ ಮಗು ನೀವು ಎಂಬುದಾಗಿ ಭಾವಿಸಿಕೊಳ್ಳಿ. ದೇವನು ನಿರಾಕಾರನೆಂದು ನೀವು ಭಾವಿಸುವವರಾದರೆ ಅವನನ್ನು ಕರುಣೆ ಮತ್ತು ಪ್ರೀತಿ ತುಂಬಿದ ತೇಜೋರಾಶಿಯಾಗಿ ಪರಿಭಾವಿಸಿ.

**ಜ್ಞಾನಯೋಗದ ಪ್ರಕಾರ ಧ್ಯಾನ:** ಕಣ್ಣುಗಳನ್ನು ಮುಚ್ಚಿ, ಈ ಮಾತುಗಳನ್ನು ದೃಢವಾಗಿ ಹೇಳಿಕೊಳ್ಳಿ: "ನಾನು ಇಂದ್ರಿಯಗಳಾಗಲಿ, ಅವುಗಳ ಶಕ್ತಿಯಾಗಲಿ ಅಲ್ಲ. ಯಾವುದರ ಬಗ್ಗೆಯೂ ಹೇಸಿಗೆಯಾಗಲಿ, ಮೋಹವಾಗಲಿ ನನಗಿಲ್ಲ. ಅತಿಯಾಸೆ, ಅಸೂಯೆ, ಅಹಂಕಾರ ನನಗಿಲ್ಲ. ನಾನು ಸುಶೀಲನಾಗಲಿ, ದುಶ್ಶೀಲನಾಗಲಿ ಅಲ್ಲ. ಪ್ರಾಪಂಚಿಕವಾದ ಯಾವುದೂ ನನ್ನನ್ನು ತಟ್ಟದು. ಯಾವ ಅಶುದ್ಧತೆಯೂ ನನ್ನನ್ನು ಮುಟ್ಟದು. ಸದಾ ಪರಿಶುದ್ಧವಾದ ಪವಿತ್ರಾತ್ಮ ನಾನು. ನನಗೆ ಹುಟ್ಟುಸಾವುಗಳಿಲ್ಲ. ನಾನು ಸದಾ ಮುಕ್ತ. ನಾನು ದಿವ್ಯಾತ್ಮನೊಡನೆ, ದಿವ್ಯ ಜ್ಞಾನದೊಡನೆ, ಪರಿಪೂರ್ಣ ಆನಂದದೊಡನೆ ಒಂದಾಗಿದ್ದೇನೆ. ನಾನು ಅಪರಿಮಿತನೂ, ಅನಂತನೂ ಆಗಿದ್ದೇನೆ.

ಈ ಎಲ್ಲ ಧ್ಯಾನದ ತಂತ್ರಗಳಿಂದ ಗರಿಷ್ಠ ಪ್ರಯೋಜನ ಪಡೆಯಬೇಕಾದಲ್ಲಿ, ಧ್ಯಾನ ಮುಗಿದೊಡನೆ ನಿಮ್ಮ ಸ್ಥಾನದಿಂದ ಕೂಡಲೇ ಮೇಲೇಳಬಾರದು. ಅಲ್ಲೇ ನಿಶ್ಶಬ್ದವಾಗಿ ಹದಿನೈದರಿಂದ ಮೂವತ್ತು ನಿಮಿಷಗಳವರೆಗೆ ಕುಳಿತು, ಅನಂತರವಷ್ಟೇ, ನಿಮ್ಮ ಚಟುವಟಿಕೆಗಳನ್ನು ಆರಂಭಿಸಿ. ಶಿಷ್ಯನ ಮನೋಧರ್ಮಕ್ಕನುಗುಣವಾಗಿ ಈ ಮೇಲಿನವುಗಳಲ್ಲಿ ಯಾವ ಧ್ಯಾನಮಾರ್ಗವು ಉಚಿತ ಎಂಬುದನ್ನು ಗುರುವು ನಿರ್ಧರಿಸುತ್ತಾನೆ. ಅದರಂತೆ ಮಾರ್ಗದರ್ಶನ ಮಾಡುತ್ತಾನೆ. ಶಿಷ್ಯನು ಈ ಎಲ್ಲ ಮಾರ್ಗಗಳನ್ನೂ ಒಮ್ಮೆಲೇ ಅನುಸರಿಸಬೇಕಾಗಿಲ್ಲ."

ಏಕಾಗ್ರತೆಯನ್ನು ಸಾಧಿಸುವುದು ಅಸಾಧ್ಯವೆಂದು ಅಂದುಕೊಳ್ಳಬೇಕಿಲ್ಲ. ನಮಗೆ ಪ್ರಿಯವಾದುದನ್ನು ಮಾಡುವಾಗ ನಮ್ಮ ಮನಸ್ಸು ಅದರಲ್ಲಿ ಏಕಚಿತ್ತದಿಂದ ತೊಡಗಿರುವುದಿಲ್ಲವೇ? ಸಮಸ್ಯೆ ಎದುರಾಗುವುದು ನಾವು ಅಪ್ರಿಯವಾದುದನ್ನು ಮಾಡಬೇಕಾಗಿ ಬಂದಾಗ. ಪ್ರಿಯವಾದುದೆಲ್ಲವೂ ಒಳ್ಳೆಯದೇ ಆಗಿರುವುದಿಲ್ಲ. ಅಂತೆಯೇ ಅಪ್ರಿಯವಾದುದು ಕೂಡ ನಮಗೆ ಒಳ್ಳೆಯದೂ, ಪ್ರಯೋಜನಕಾರಿಯೂ ಆಗಿರಬಹುದು. ಪ್ರಿಯವಾದುದಿರಲಿ, ಅಪ್ರಿಯವಾದುದಿರಲಿ ಅದರಿಂದ ನಮಗೆ ಪ್ರಯೋಜನ ಉಂಟೋ ಇಲ್ಲವೋ ಎಂಬುದು ಮುಖ್ಯ. ಏಕಾಗ್ರತೆಯ ತರಬೇತಿಯೇ ಆದ ಧ್ಯಾನದಿಂದ ಇದಕ್ಕೆ ಸಹಾಯ ಒದಗುತ್ತದೆ. ಬದುಕಿನಲ್ಲಿ ಯಶಸ್ಸನ್ನು ಗಳಿಸಲು ಏಕಾಗ್ರತೆ ಅನಿವಾರ್ಯ. ಸ್ವಾಮಿ ವಿವೇಕಾನಂದರು ಹೇಳುತ್ತಿದ್ದಂತೆ, ಮೇಧಾವಿಗೂ ಮೂರ್ಖನಿಗೂ ವ್ಯತ್ಯಾಸ ಇರುವುದು ಏಕಾಗ್ರತೆಯ ಮಟ್ಟದಲ್ಲಿಯೇ. ಭಗವದ್ಗೀತೆಯು ಹೇಳುವಂತೆ ಒಳ್ಳೆಯ ಕೆಲಸ ಮಾಡುವವರಿಗೆ ದುಷ್ಪರಿಣಾಮದ ಅಂಜಿಕೆ ಇರುವುದಿಲ್ಲ. ಧ್ಯಾನದ ನಿಮ್ಮ ಪ್ರಯತ್ನವು ಒಳ್ಳೆಯ ಪರಿಣಾಮವನ್ನು ತರಲಿ.

***(ಸೂಚನೆ: ಮೇಲೆ ಕೊಟ್ಟಿರುವುವು ಸಾಮಾನ್ಯ ಸೂಚನೆಗಳು. ಧ್ಯಾನಾಸಕ್ತರು ಪರಿಣತ ಶಿಕ್ಷಕರ ಅಥವಾ ಗುರುಗಳ ಮಾರ್ಗದರ್ಶನ ಪಡೆದುಕೊಂಡ ಅನಂತರವಷ್ಟೇ ಧ್ಯಾನಾಭ್ಯಾಸದಲ್ಲಿ ತೊಡಗಬೇಕು –ಸಂ.)***

ವಿಶೇಷ ಲೇಖನ

# ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವ

ಸ್ವಾಮಿ ಸಂಬುದ್ಧಾನಂದ
ಅನುವಾದ: ಪಿ. ಉಷಾ

ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವವನ್ನು ಆಚರಿಸಬೇಕೆಂಬ ವಿಚಾರ ೧೯೩೩ ರಲ್ಲಿಯೇ ಮೂಡಿತ್ತು. ೧೯೩೪ ರಲ್ಲಿ ರಾಮಕೃಷ್ಣ ಮಹಾಸಂಘದ ಧರ್ಮದರ್ಶಿಗಳ ಮಂಡಲಿಯು (Board of trustees) ಸೂಕ್ತ ರೀತಿಯಲ್ಲಿ ಅದನ್ನು ಆಚರಿಸಬೇಕೆಂಬ ನಿರ್ಧಾರಕ್ಕೆ ಬಂದಿತು. ಈ ಉತ್ಸವದ ಮೇಲ್ವಿಚಾರಣೆಗೆ ಸಾಧುಗಳೆಲ್ಲ ಒಮ್ಮತದಿಂದ ನನ್ನನ್ನು ನೇಮಿಸಿದರು.

ಮಾಯಾವತಿಗೆ ಹೋಗಿ ಆರೋಗ್ಯವನ್ನು ಸುಧಾರಿಸಿಕೊಂಡ ನಾನು ಕೇದಾರ–ಬದರಿಯ ತೀರ್ಥಯಾತ್ರೆ ಮುಗಿಸಿಕೊಂಡು ಬೇಲೂರುಮಠಕ್ಕೆ ಬಂದ ನಂತರವಷ್ಟೇ ಈ ಕೆಲಸವನ್ನು ಒಪ್ಪಿಕೊಂಡೆ. ಶತಮಾನೋತ್ಸವಕ್ಕೆ ಇನ್ನು ಎರಡು ವರ್ಷಗಳ ಕಾಲವಷ್ಟೇ ಉಳಿದಿದೆ. ಜನಬಲದ ಅಭಾವ, ಹಣದ ಕೊರತೆ ಹಾಗೂ ಸಮಯದ ಅಭಾವಗಳನ್ನು ಕಂಡಾಗ ನಾನು ಆತಂಕಗೊಂಡೆ. ಆದರೆ ಈ ಕಾರ್ಯವೂ ಶ್ರೀರಾಮಕೃಷ್ಣರಿಗಾಗಿ ಮೀಸಲಾಗಿದ್ದರಿಂದ ಹಿಂಜರಿಯದೆ ಕಾರ್ಯತತ್ಪರನಾದೆ. ಕೆಲಸವನ್ನು ಕೈಗೊಂಡಾಗ ಅನೇಕ ಅಡಚಣೆಗಳು ತಲೆದೋರಿದವು. ಜನಬಲವಿಲ್ಲ, ಹಣವಿಲ್ಲ! ಆದರೂ ಬೇಲೂರುಮಠದ ಅಧಿಕಾರಿವರ್ಗದವರು ನನಗೆ, "ಉತ್ಸವವನ್ನು ವಿಶ್ವದಾದ್ಯಂತ ಅದ್ದೂರಿಯಿಂದಲೂ ಸುವ್ಯವಸ್ಥಿತವಾಗಿಯೂ ಏರ್ಪಡಿಸು" ಎಂದಾಗ, "ಇದೊಳ್ಳೇ ಚೆನ್ನಾಗಿದೆ!" ಎಂದುಕೊಂಡೆ. ಈ ಕೆಲಸವು ಹೇಗೆ ನಿಧಾನವಾಗಿ ರೂಪತಾಳಿತೆಂದು ಹೇಳಬೇಕಾದರೆ, ಅದಕ್ಕೆ ಮೊದಲು ಹಲವು ವಿಚಾರಗಳನ್ನು ಹೇಳಬೇಕು.

ಪ್ರಾರಂಭದಲ್ಲಿ ಮೂರು ಸಮಿತಿಗಳನ್ನು ರಚಿಸಲಾಯಿತು. ೧. ಸಾಮಾನ್ಯ ಸಮಿತಿ (General Committee). ೨. ನಿರ್ವಹಣಾ ಸಮಿತಿ (Working Committee) ಮತ್ತು ೩. ಕಾರ್ಯಕಾರಿ ಸಮಿತಿ (Executive Committee). ಇವಲ್ಲದೆ, ಉತ್ಸವದ ಅಂಗವಾಗಿ ನಡೆಯಲಿರುವ ಧರ್ಮಸಮ್ಮೇಳನಕ್ಕಾಗಿ ಒಂದು ಉಪಸಮಿತಿಯನ್ನೂ (Sub-Committee) ರಚಿಸಲಾಯಿತು. ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಅಖಂಡಾನಂದರನ್ನು ಸಾಮಾನ್ಯ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಈ ಸಮಿತಿಯಲ್ಲಿ ೬೪ ಮಂದಿ ಸಹಾಧ್ಯಕ್ಷರುಗಳು ಇದ್ದರು. ಇವರು ಭಾರತ ಮಾತ್ರವಲ್ಲದೇ ಯುರೋಪು–ಅಮೆರಿಕ ಖಂಡಗಳಿಗೆ ಸೇರಿದ ವಿಖ್ಯಾತ ವ್ಯಕ್ತಿಗಳಾಗಿದ್ದರು. ಉದಾಹರಣೆಗೆ ನೊಬೆಲ್ ಪುರಸ್ಕೃತರೂ ಪ್ರಸಿದ್ಧ ವ್ಯಕ್ತಿಗಳೂ ಆದ ರವೀಂದ್ರನಾಥ ಟ್ಯಾಗೋರ್ ಮತ್ತು ರೊಮಾ ರೊಲಾ ಈ ಸಮಿತಿಯಲ್ಲಿ ಸಹಾಧ್ಯಕ್ಷರಾಗಿದ್ದರು. ಡಾ. ಎಸ್. ರಾಧಾಕೃಷ್ಣನ್, ಸರ್ ಜಗದೀಶ್ ಚಂದ್ರ ಬೋಸ್, ಬಾಬು ರಾಜೇಂದ್ರ ಪ್ರಸಾದರಂಥ ಜನಮಾನ್ಯ ಗಣ್ಯರೂ ಈ ಸಮಿತಿಯ ಸಹಾಧ್ಯಕ್ಷರುಗಳಾಗಿದ್ದರು. ಸಹಾಧ್ಯಕ್ಷರಾಗಲು ನಾನು ಮಹಾತ್ಮ ಗಾಂಧಿಯವರನ್ನೂ ವಿನಂತಿಸಿಕೊಂಡೆ. ಆದರೆ ಅದಕ್ಕವರು ಒಪ್ಪಲಿಲ್ಲ. ಏಕೆಂದರೆ ಯಾವುದೇ ಸ್ಥಾನವನ್ನು ಒಪ್ಪಿಕೊಂಡರೆ, ಅದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬುದು ಅವರ ಅಭಿಪ್ರಾಯ. ಆದ್ದರಿಂದ ಅವರು ನಮ್ಮ ಸಾಮಾನ್ಯ ಸಮಿತಿಯ ಪ್ರಥಮ ಸದಸ್ಯರಾದರು.

ನನಗೊಪ್ಪಿಸಿದ ಕಾರ್ಯವನ್ನು ನೆರವೇರಿಸಲು ಸಮರ್ಥ ಸಹಾಯಕರ ಅಗತ್ಯವಿತ್ತು. ನಮ್ಮ ಪ್ರಧಾನ ಕಛೇರಿಯವರು ಸ್ವಾಮಿ ನಿತ್ಯಸ್ವರೂಪಾನಂದರೆಂಬ ಸಾಧುಗಳನ್ನು ಮಾತ್ರ ಕಳುಹಿಸಿದರು. ಈ ಸ್ವಾಮಿಗಳು ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದರು. ನಾನು ಇತರ ಕೆಲಸಗಳನ್ನು ಮಾಡುತ್ತಿದ್ದೆ. ಕಾಲಕ್ರಮೇಣ ಕೊಲ್ಕತಾದ ಕಾಲೇಜ್ ರಸ್ತೆಯಲ್ಲಿ ಉತ್ಸವಕ್ಕೆ ಸಂಬಂಧಿಸಿದ ಕಛೇರಿಯನ್ನು ತೆರೆದು, ನಮ್ಮ ಸಾಮಗ್ರಿಗಳನ್ನು ಅಲ್ಲಿಗೆ ವರ್ಗಾಯಿಸಿದೆವು. ಇದಲ್ಲದೆ, ಮಠದ ಪ್ರಧಾನ ಕಾರ್ಯಾಲಯದಲ್ಲೂ ಒಂದು ಕಛೇರಿಯಿತ್ತು. ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಮಠದಲ್ಲಿ ಕೆಲಸ ಮಾಡಿ, ಊಟದ ಬಳಿಕವಷ್ಟೇ ಕೊಲ್ಕತಾದ ಕಛೇರಿಗೆ ಧಾವಿಸುತ್ತಿದ್ದೆ. ಅಲ್ಲಿ ರಾತ್ರಿ ೯–೧೦ ಗಂಟೆಯವರೆಗೆ ಕೆಲಸಮಾಡಿ ಅನಂತರ ಮಠಕ್ಕೆ ಮರಳಿ ಬರುತ್ತಿದ್ದೆ. ಕಾರ್ಯವು ಮುಂದುವರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಸಹಾಯಕರು ಸಿಕ್ಕಿದರು. ಹೀಗೆ ಎಲ್ಲವೂ ಚೆನ್ನಾಗಿ ನಡೆಯುತ್ತಿತ್ತು. ಹೆಚ್ಚಿನ ಹಣವನ್ನು ಪಡೆಯಲು ಪ್ರಯತ್ನಿಸುತ್ತಿದ್ದಂತೆ, ಅದು ಸಹ ದೊರಕುತ್ತಿತ್ತು.

ನಾವೀಗ ಶ್ರೀರಾಮಕೃಷ್ಣರ ೧೭೫ ನೇ ಜನ್ಮಜಯಂತಿಯನ್ನು ಆಚರಿಸುತ್ತಿದ್ದೇವೆ. ೭೫ ವರ್ಷಗಳ ಹಿಂದೆ, ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವದ ಆಚರಣೆ ನಡೆದದ್ದು ಹೇಗೆ ಎನ್ನುವ ಕುತೂಹಲ ನಮ್ಮಲ್ಲಿ ಮೂಡುವುದು ಸಹಜ. ಆದರ ನೇತೃತ್ವ ವಹಿಸಿದ್ದ ಹಿರಿಯ ಸ್ವಾಮೀಜಿಯೊಬ್ಬರ ಸ್ವಾರಸ್ಯಕರ ನೆನಪುಗಳು ಇಲ್ಲಿವೆ. ಸ್ವಾಮೀಜಿಯವರು ಬಹುಕಾಲ ಮುಂಬೈನ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದರು. ವಾರಾಣಸಿಯ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವ ಪಿ. ಉಷಾ ಅವರು ಈ ಲೇಖನದ ಅನುವಾದ ಮಾಡಿಕೊಟ್ಟಿದ್ದಾರೆ.

ವಿಶ್ವಾದ್ಯಂತ ಉತ್ಸವವನ್ನು ಆಚರಿಸಬೇಕಾದರೆ ಅದಕ್ಕೆ ಬೇಕಾಗುವ ಪ್ರಚಾರದ ಅಗತ್ಯವೂ ನಮಗೆ ತಿಳಿದಿತ್ತು. ಮೊಟ್ಟಮೊದಲು ಉತ್ಸವವನ್ನು ಕೊಲ್ಕತಾದಲ್ಲಿ ವಿಜೃಂಭಣೆಯಿಂದ ನಡೆಸಬೇಕು. ಅನಂತರ ಭಾರತದಾದ್ಯಂತ ಹಾಗೂ ಯುರೋಪು–ಅಮೆರಿಕದಲ್ಲಿ ಕೂಡ ಏರ್ಪಡಿಸಬೇಕೆಂದು ನಿರ್ಧರಿಸಲಾಯಿತು. ಇದರಿಂದಾಗಿ ಪತ್ರವ್ಯವಹಾರ ನಿರಂತರವಾಗಿ ಹೆಚ್ಚಾಗುತ್ತಲೇ ಇತ್ತು.

ಆಗ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಸ್ವಾಮಿ ಅಖಂಡಾನಂದರು ನಮ್ಮ ಸಮಿತಿಯ ಅಧ್ಯಕ್ಷರಾದರೂ, ನಮ್ಮ ಸಭೆಗಳಲ್ಲಿ ಅವರು ಉಪಸ್ಥಿತರಿರುತ್ತಿರಲಿಲ್ಲ. ಮಾತ್ರವಲ್ಲ, ಅವರು ಶತಮಾನೋತ್ಸವದ ಆಚರಣೆಯನ್ನೂ ವಿರೋಧಿಸಿದರು. ಅವರು, "ಶ್ರೀರಾಮಕೃಷ್ಣರು ಜನ್ಮ–ಮೃತ್ಯುಗಳನ್ನು ಮೀರಿದ ಪರಬ್ರಹ್ಮಸ್ವರೂಪಿ" ಎಂದು ವಾದಿಸಿದರೆ, ಶತಮಾನೋತ್ಸವ ಸಮಿತಿಯವರು, "ನಾವು, ಅವತಾರವೆತ್ತಿ ಬಂದ ಪರಬ್ರಹ್ಮಸ್ವರೂಪಿಯ ಜನ್ಮೋತ್ಸವವನ್ನು ಆಚರಿಸಹೊರಟಿದ್ದೇವೆ" ಎಂದು ವಾದಿಸಿದರು. ಆದರೂ ಪರಮಾಧ್ಯಕ್ಷರು ಅದಕ್ಕೆ ಸಮ್ಮತಿಸಲಿಲ್ಲ. ಆದರೆ ಹಿರಿಯ ಸಾಧುಗಳು ಹಾಗೂ ಸಂಘದ ಟ್ರಸ್ಟಿಗಳ ಪ್ರೋತ್ಸಾಹದಿಂದ ಈ ಕಾರ್ಯದಲ್ಲಿ ಮುಂದುವರಿದೆ.

ಕಾರ್ಯವು ಮುಂದುವರಿದಂತೆ ಶತಮಾನೋತ್ಸವದ ಸಭಾಕಾರ್ಯಕ್ರಮಗಳನ್ನು ನಿಗದಿಗೊಳಿಸಲಾಯಿತು. ಅದರ ಅಂಗವಾಗಿ ಸರ್ವಧರ್ಮ ಸಮ್ಮೇಳವನ್ನೂ ಹಮ್ಮಿಕೊಳ್ಳಲಾಯಿತು. ಇದರಲ್ಲಿ ೧೪ ಅಧಿವೇಶನಗಳು ಇದ್ದವು. ೭ ದಿನಗಳ ಪರ್ಯಂತ ಅವೆಲ್ಲ ನಡೆಯಬೇಕಾಗಿತ್ತು. ೨೫೦೦ ಜನರು ಕುಳಿತುಕೊಳ್ಳಬಹುದಾದ ಕೊಲ್ಕತಾದ ಟೌನ್‌ಹಾಲ್ ಅನ್ನು ಇದಕ್ಕಾಗಿ ಕಾದಿರಿಸಲಾಯಿತು. ಅಧಿವೇಶನಗಳು ಸಾರ್ವಜನಿಕರಿಗೆ ತೆರೆದಿದ್ದರೆ ಜನರು ಕಿಕ್ಕಿರಿದು ತುಂಬಿರು ವರೆಂದು ಟಿಕೇಟಿನ ಏರ್ಪಾಟಾಗಿತ್ತು. ಬೆಳಗ್ಗೆ ಮತ್ತು ಸಾಯಂಕಾಲ – ಹೀಗೆ ಎರಡು ಅಧಿವೇಶನಗಳಿದ್ದು, ಸಂಜೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರುತ್ತಿದ್ದರು. ಭಾನುವಾರವಂತೂ ಸಭಾಮಂದಿರವು ತುಂಬಿರುತ್ತಿತ್ತು. ಸಾಯಂಕಾಲದ ಅಧಿವೇಶನಗಳಲ್ಲಿ ವಿದೇಶಿ ಗಣ್ಯವ್ಯಕ್ತಿಗಳೂ ಭಾಷಣ ಮಾಡುತ್ತಿದ್ದರು.

ನಮಗೆ ಮೊದಲು ಬೇಕಾದುದೆಂದರೆ ಅಧ್ಯಕ್ಷರ ಸಂದೇಶ. ಈ ಸಂದೇಶವನ್ನು ವಿಶ್ವಾದ್ಯಂತ ಪ್ರಚುರಪಡಿಸಬೇಕು. ಆದರೆ ಅಧ್ಯಕ್ಷರೇ ಇದನ್ನು ವಿರೋಧಿಸುತ್ತಿರುವಾಗ, ಇದನ್ನು ಪಡೆಯುವುದಾದರೂ ಹೇಗೆ? ಇದೊಂದು ದೊಡ್ಡ ಸಮಸ್ಯೆಯೇ ಆಯಿತು.

ಸ್ವಾಮಿ ವಿವೇಕಾನಂದರ ಸೋದರ ಸಂನ್ಯಾಸಿಗಳಾಗಿದ್ದ ಸ್ವಾಮಿ ಅಖಂಡಾನಂದರಿಗೆ, ವಿವೇಕಾನಂದರಿಗೆ ಪ್ರೀತಿಪಾತ್ರರಾದವರಲ್ಲಿ ಬಹಳ ಆತ್ಮೀಯತೆಯಿತ್ತು. ಇಂಥವರಲ್ಲಿ ಒಬ್ಬರಾದ ಮಿಸ್ ಜೊಸೆಫಿನ್ ಮ್ಯಾಕ್ಲೌಡ್ ಆಗ ಬೇಲೂರುಮಠದಲ್ಲಿ ತಂಗಿದ್ದರು. ಸಮಸ್ಯೆಯ ಪರಿಹಾರಕ್ಕೆ ಆಕೆ ನಮ್ಮ ನೆರವಿಗೆ ಬಂದರು. ಸ್ವಾಮಿ ಅಖಂಡಾನಂದರು ಆಗ ಇದ್ದುದು ಬೇಲೂರುಮಠದಿಂದ ಸುಮಾರು ಒಂದುನೂರು ಮೈಲು ದೂರದಲ್ಲಿದ್ದ ಸರಗಾಛಿಯ ಆಶ್ರಮದಲ್ಲಿ. ಆಕೆ ಅಲ್ಲಿಗೆ ಹೋಗಿ ಸ್ವಾಮಿಗಳನ್ನು ಕಂಡು ಅವರ ಸಂದೇಶವನ್ನು ತಂದುಕೊಡಲು ಮುಂದಾದರು. ಆಗಿನ ಕಾಲದ ಭಾರತೀಯ ರೈಲಿನ ಸೆಲೂನ್ ಕಾರಿನಲ್ಲಿ ಪ್ರಯಾಣಮಾಡಿ ಆಕೆ ಸರಗಾಛಿ ತಲುಪಿದಾಗ, ಸ್ವಾಮಿ ಅಖಂಡಾನಂದರಿಗೆ ಅಪರಿಮಿತ ಆನಂದವೂ, ಆಶ್ಚರ್ಯವೂ ಆಯಿತು. ಅವರು ಆಕೆಯನ್ನು ಸ್ವಾಗತಿಸಿ ಆಶ್ರಮವನ್ನೂ ಅಲ್ಲಿನ ಉದ್ಯಾನ ವನ್ನೂ ತೋರಿಸಿ, ಬಳಿಕ ಆಕೆಯೊಡನೆ ಮಾತನಾಡಲು ಕುಳಿತುಕೊಂಡರು. ಅದೇ ಸುಸಮಯವೆಂದು ಮಿಸ್ ಮ್ಯಾಕ್ಲೌಡ್ ಉಪಾಯವಾಗಿ ಶತಮಾನೋತ್ಸವದ ವಿಷಯವನ್ನೆತ್ತಿದರು. ಆಗಲೂ ಸ್ವಾಮಿಗಳು ಅದನ್ನು ಖಂಡಿಸುತ್ತ ಹೋದರು. ಮಿಸ್ ಮ್ಯಾಕ್ಲೌಡ್ ತಾವು ತೆಗೆದುಕೊಂಡು ಹೋಗಿದ್ದ ಕೆಲವು ಹಾಳೆಗಳಲ್ಲಿ ಅವರಾಡಿದ ಮಾತುಗಳನ್ನೆಲ್ಲ ಬರೆದುಕೊಂಡರು. ಬಳಿಕ ಸ್ವಾಮಿಗಳಿಂದ ಬೀಳ್ಕೊಂಡು ಕೊಲ್ಕತಾಗೆ ವಾಪಸಾಗಿ, ಬೇಲೂರುಮಠದಲ್ಲಿದ್ದ ಸ್ವಾಮಿ ವಿವೇಕಾನಂದರ ಶಿಷ್ಯರಾದ ಪೂಜ್ಯ ಸ್ವಾಮಿ ಶುದ್ಧಾನಂದರಿಗೆ ಈ ಹಾಳೆಗಳನ್ನು ಒಪ್ಪಿಸಿದರು. ಸ್ವಾಮಿ ಶುದ್ಧಾನಂದರು ನನ್ನನ್ನು ಕರೆದು ಹೀಗೆಂದರು: "ಸ್ವಾಮಿ ಸಂಬುದ್ಧಾನಂದರೇ, ಮಿಸ್ ಮ್ಯಾಕ್ಲೌಡ್ ಅವರು ಸರಗಾಛಿಯಲ್ಲಿ ನಮ್ಮ ಅಧ್ಯಕ್ಷರನ್ನು ಭೇಟಿಮಾಡಿ ಈ ಕಾಗದಗಳನ್ನು ತಂದಿದ್ದಾರೆ. ನೀವಿದನ್ನು ಓದಬಹುದು." "ಹೇಳಿ, ಏನು ಬರೆದಿದ್ದಾರೆ?" ಎಂದು ನಾನು ಕೇಳಿದೆ. ಅದಕ್ಕೆ ಅವರೆಂದರು, "ನಾನದನ್ನು ಕೂಲಂಕಷವಾಗಿ ಓದಿರುವೆ. ಆದರೆ ಇಡೀ ಪ್ರಪಂಚಕ್ಕೆ ನೀಡಬಹುದಾದ ಅಧ್ಯಕ್ಷರ ಸಂದೇಶಕ್ಕೆ ತಕ್ಕನಾದ ಒಂದೇ ಒಂದು ವಾಕ್ಯವೂ ಅದರಲ್ಲಿಲ್ಲ!" ಇದರಿಂದ ನಾನು ತುಂಬ ಹತಾಶನಾದೆ. ಅಧ್ಯಕ್ಷರ ಸಂದೇಶಕ್ಕೆ ಬದಲಾಗಿ ಸ್ವಾಮಿ ವಿವೇಕಾನಂದರ ಕೆಲವು ನುಡಿಗಳನ್ನು ಬಳಸಿದರಾಗದೇ ಎಂಬ ನನ್ನ ಅಭಿಪ್ರಾಯವನ್ನು ಸ್ವಾಮಿ ಶುದ್ಧಾನಂದರೂ ಒಪ್ಪಿದರು. ಎಂಟು ಸಂಪುಟಗಳ ಸ್ವಾಮೀಜಿಯವರ ಕೃತಿಶ್ರೇಣಿಯಲ್ಲಿ ನಮಗೆ ಬೇಕಾಗಿದ್ದ ಭಾಗಗಳನ್ನು ಅವರು ಆರಿಸಿದರು. ಇವುಗಳನ್ನು ಸಮಿತಿಯ ಮುಂದಿರಿಸಲಾಯಿತು. ಕೆಲ ಸದಸ್ಯರು ಬ್ರಿಟಿಷರು ರಾಜದ್ರೋಹವೆಂದು ಬಗೆಯುವ ಕೆಲವು ನುಡಿಗಳನ್ನು ಕೈಬಿಡಬೇಕೆಂದು ಅಭಿಪ್ರಾಯಪಟ್ಟರು. ನಾನದಕ್ಕೆ

ಒಪ್ಪಲಿಲ್ಲ. ಕೊನೆಗೆ ಯಾವ ವಾಕ್ಯವನ್ನೂ ಬಿಡದೆ, ಸಂದೇಶವನ್ನು ಏಷಿಯಾ, ಯುರೋಪ ಹಾಗೂ ಅಮೆರಿಕಕ್ಕೆ ಕಳುಹಿಸುವುದೆಂದಾಯಿತು. ಸಂದೇಶವನ್ನು ಕಳುಹಿಸುವ ಕಡೆಯ ದಿನದಂದು, ಹಗಲೂ ಇರುಳೂ ಬಿಡುವಿಲ್ಲದೆ ದುಡಿದೆವು. ಆದರೆ ಪತ್ರಗಳನ್ನು ತೆಗೆದುಕೊಂಡು ಅಂಚೆ ಕಛೇರಿಗೆ ಹೋದಾಗ, ಅಂಚೆಚೀಲಗಳನ್ನು ಆಗಲೇ ಸೀಲ್ ಮಾಡಲಾಗಿದೆ ಎನ್ನಬೇಕೆ? ಅದೃಷ್ಟವಶಾತ್ ಭಾರತ ಸರ್ಕಾರದ ಅಸಿಸ್ಟೆಂಟ್ ಪೋಸ್ಟಮಾಸ್ಟರ್ ಜನರಲ್ ನಮ್ಮ ಶತಮಾನೋತ್ಸವ ಕಾರ್ಯಾಲಯದಲ್ಲಿ ಸ್ವಯಂಸೇವಕರಾಗಿದ್ದರಿಂದ, ಅವರ ನೆರವಿನಿಂದ ಸೀಲ್ ಆಗಿದ್ದ ಚೀಲಗಳನ್ನು ತೆರೆಸಿ, ಅವುಗಳಲ್ಲಿ ನಮ್ಮ ಪತ್ರಗಳನ್ನು ತುಂಬಿ, ಮತ್ತೆ ಸೀಲ್ ಮಾಡಲಾಯಿತು. ಅವುಗಳನ್ನು ಕಳುಹಿಸಿ ಬಂದಾಗ ಮನಸ್ಸಿಗೆ ನೆಮ್ಮದಿಯಾಯಿತು.

ಪತ್ರಗಳನ್ನು ಕಳುಹಿಸಿದ ೨–೩ ದಿನಗಳಲ್ಲಿ ಸರಗಾಛಿ ಆಶ್ರಮದಿಂದ ಸ್ವಾಮಿ ಅಖಂಡಾನಂದರ ಪತ್ರವನ್ನು ಒಬ್ಬನು ತೆಗೆದುಕೊಂಡು ಬಂದನು. ಸ್ವಾಮಿ ಶುದ್ಧಾನಂದರು ನನ್ನನ್ನು ಕರೆದು, "ಸಂಬುದ್ಧಾನಂದರೇ, ಕೊನೆಗೂ ನಮ್ಮ ಅಧ್ಯಕ್ಷರು ತಮ್ಮ ಸಂದೇಶವನ್ನು ಕಳುಹಿಸಿರುವರು" ಎಂದರು. ನಾನೆಂದೆ, "ಮಹಾರಾಜ್, ನೀವದನ್ನು ಓದಿರುವಿರಿ, ತಾನೇ?" "ಹೌದು", "ಹೇಗಿದೆ?" "ಅವರು ಬಹಳ ಸೊಗಸಾಗಿ ಬರೆದಿದ್ದಾರೆ."

ಪತ್ರವನ್ನು ಬಂಗಾಳಿ ಭಾಷೆಯಲ್ಲಿ ಬರೆಯಲಾಗಿತ್ತು. ಶತಮಾನೋತ್ಸವವು ಪ್ರಾರಂಭವಾಗಲು ಇನ್ನು ಎರಡು ದಿನಗಳು ಮಾತ್ರವೇ ಉಳಿದಿವೆ. ೩೦೦ ಪದಗಳ ಈ ಸಂದೇಶವನ್ನು ಇಂಗ್ಲಿಷಿಗೆ ಅನುವಾದಿಸಿ, ಟೆಲಿಗ್ರಾಮ್ ಮುಖಾಂತರ ಒಂದೇ ಒಂದು ದಿನದಲ್ಲಿ ಏಷಿಯಾ, ಯುರೋಪ, ಅಮೆರಿಕ – ಎಲ್ಲೆಡೆಯೂ ಕಳುಹಿಸಬೇಕು! ಈ ಸಮಸ್ಯೆಯು ಬಗೆಹರಿದ ರೀತಿಯೂ ಸ್ವಾರಸ್ಯಕರವಾಗಿದೆ.

ಬಂಗಾಳಿ ಸಂದೇಶವನ್ನು ಆದಷ್ಟು ಬೇಗನೇ ಇಂಗ್ಲಿಷಿಗೆ ಅನುವಾದಿಸಬೇಕು. ಅಲ್ಲದೇ ಅದು ಅಧಿಕೃತವಾಗಿಯೂ ಇರಬೇಕಾದ್ದರಿಂದ, ಕೊಲ್ಕತಾದ ಉಚ್ಚ ನ್ಯಾಯಾಲಯದಲ್ಲಿದ್ದ ಓರ್ವ ಅನುವಾದಕರಿಂದ ಅದನ್ನು ಭಾಷಾಂತರಿಸಲಾಯಿತು. ದೀರ್ಘವಾದ ಈ ಟೆಲಿಗ್ರಾಮನ್ನು ಕಳುಹಿಸಲು ಒಂದು ಪದಕ್ಕೆ ಒಂದು ರೂಪಾಯಿಯಂತೆ ಬಹಳವೇ ಖರ್ಚಾಯಿತು. ಟೆಲಿಗ್ರಾಮ್ ಕಳುಹಿಸಿ ನಾವೆಲ್ಲ ನಿಶ್ಚಿಂತರಾದೆವು. ಶತಮಾನೋತ್ಸವವನ್ನು ವಿರೋಧಿಸುತ್ತಿದ್ದ ಸ್ವಾಮಿ ಅಖಂಡಾನಂದರ ಮನಸ್ಸು ಹೇಗೆ ಬದಲಾಯಿತೆಂದು ನಾವೆಲ್ಲರೂ ಚಕಿತರಾದೆವು.

ಕಾರಣವಿದು – ಸ್ವಾಮಿ ಅಖಂಡಾನಂದರು ಎಂದಿನಂತೆ ಆ ರಾತ್ರಿಯೂ ಮಲಗಿದರು. ಒಂದು ಗಂಟೆಯ ಸುಮಾರಿಗೆ ಕೋಣೆಯಿಂದ ಹೊರಬಂದು ಕೆಲವು ಸಾಧುಗಳನ್ನು ಕರೆದರು. ಒಬ್ಬರನ್ನು ಕುರಿತು, "ನನ್ನ ಪೆನ್ನು ತೆಗೆದುಕೊಂಡು ಬಾ" ಎಂದರು. ಮತ್ತೊಬ್ಬರಿಗೆ, "ಕೆಲವು ಕಾಗದದ ಹಾಳೆಗಳನ್ನೂ, ಒಂದು ಲಾಟೀನನ್ನೂ ತಾ" ಎಂದರು. ಈ ವಸ್ತುಗಳು ದೊರೆತಾಗ ತಮ್ಮ ಸಂದೇಶವನ್ನು ಬರೆಯತೊಡಗಿದರು. ಅದರ ಹಿನ್ನೆಲೆ ಹೀಗಿತ್ತು: ಸುಮಾರು ಒಂದು ಗಂಟೆಯ ಹೊತ್ತಿಗೆ ಇನ್ನೂ ಮಲಗಿದ್ದಾಗಲೇ ಶ್ರೀರಾಮಕೃಷ್ಣರು ಅವರಿಗೆ ದರ್ಶನವಿತ್ತು, "ಗಂಗಾಧರ! ನನ್ನ ಮಕ್ಕಳು ವಿಶ್ವಾದ್ಯಂತ ಶತಮಾನೋತ್ಸವವನ್ನು ಏರ್ಪಡಿಸಿದ್ದಾರೆ. ಕೆಲವು ಮಾತುಗಳ ಮೂಲಕ ಪ್ರಪಂಚವನ್ನು ಆಶೀರ್ವದಿಸಲಾಗದೆ?" ಎಂದಾಗ ಸ್ವಾಮಿಗಳು ಬೆಚ್ಚಿದರು. ಎದ್ದು ಕುಳಿತು ಶ್ರೀರಾಮಕೃಷ್ಣರು ಅಂತರ್ಧಾನರಾಗುವುದನ್ನು ಕಂಡರು. ಹೀಗೆ ಉತ್ಸವಕ್ಕೆ ಬೇಕಾದ ಬಹು ಮುಖ್ಯ ಕಾರ್ಯವೊಂದು ನೆರವೇರಿತು. ಆದರೆ ದುಃಖದ ಸಂಗತಿಯೆಂದರೆ ಉತ್ಸವದ ಪ್ರಾರಂಭಕ್ಕೆ ಮುನ್ನವೇ ಅವರು ಮಹಾಸಮಾಧಿ ಹೊಂದಿದರು. ಸ್ವಾಮಿ ವಿಜ್ಞಾನಾನಂದರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ೧೯೩೭ ರ ಮಾರ್ಚ್ ೧ ರಿಂದ ೮ ರವರೆಗೆ ನಡೆಯಿತು. ಇವರು ಹೆಚ್ಚಾಗಿ ಸಾಯಂಕಾಲದ ಅಧಿವೇಶನಗಳಲ್ಲಿ, ಮೌನವಾಗಿಯೇ ಕುಳಿತು ಪಾಲ್ಗೊಳ್ಳುತ್ತಿದ್ದರು.

ದೇಶವಿದೇಶಗಳಿಂದ ಹಲವಾರು ಗಣ್ಯರು ತಾವಾಗಿಯೇ ಉತ್ಸವದಲ್ಲಿ ಭಾಗವಹಿಸಿದರು. ಆದರೆ ನೊಬೆಲ್ ಪ್ರಶಸ್ತಿ ಪಡೆದ ರವೀಂದ್ರನಾಥ್ ಟ್ಯಾಗೋರರ ಸಹಕಾರವನ್ನು ಬಹಳ ಕಷ್ಟದಿಂದಲೇ ಪಡೆದೆವು. ಸರ್ವಧರ್ಮ ಸಮ್ಮೇಳನದ ಸಭೆಯೊಂದರ ಅಧ್ಯಕ್ಷತೆ ವಹಿಸಲು ಕೇಳಿಕೊಳ್ಳಲು ನಾನವರ ಬಳಿ ಹೋದಾಗ ಅವರೆಂದರು, "ಸ್ವಾಮೀಜಿಯವರೇ, ನಾನು ಮಾತನಾಡಲು ಹೋದಲ್ಲೆಲ್ಲ ಗಲಾಟೆ ದೊಂಬಿಯನ್ನೇ ನೋಡುತ್ತೇನೆ. ಕೆಲವೊಮ್ಮೆ ಜನ ತಮ್ಮತಮ್ಮಲ್ಲಿ ಜಗಳವಾಡಿ ಹೊಡೆದಾಡಿಕೊಂಡು ರಕ್ತಪಾತವೇ ಆಗುತ್ತದೆ. ಅಂಥ ಮತ್ತೊಂದು ದೃಶ್ಯವನ್ನು ನಿಮ್ಮಲ್ಲೂ ನಾನು ಕಾಣಬೇಕೇನು?" ನಾನೆಂದೆ, "ಅಂಥದ್ದೇನೂ ನಡೆಯಲಾರದೆಂದು ನಿಮಗೆ ನಾನು ಭರವಸೆ ನೀಡುತ್ತೇನೆ." "ನಿಮ್ಮ ಸಭೆ ನಡೆಯುವುದೆಲ್ಲಿ?" ಎಂಬ ಅವರ ಪ್ರಶ್ನೆಗೆ ನಾನೆಂದೆ, "ಟೌನ್‌ಹಾಲಿನಲ್ಲಿ". "ನನಗೆ ಅಷ್ಟೊಂದು ಮೆಟ್ಟಿಲುಗಳನ್ನು ಹತ್ತಲಾಗುವುದಿಲ್ಲ. ಆದ್ದರಿಂದ ನಾನು ಬರುವುದಿಲ್ಲ" ಎಂದರು. ಆಗ ನಾನು, "ಹಾಗಾದರೆ ವಿಶ್ವವಿದ್ಯಾನಿಲಯದ ಇನ್ಸ್ಟಿಟ್ಯೂಟ್ ಹಾಲ್‌ನ ನೆಲಮಾಳಿಗೆಯಲ್ಲಿ ಸಭೆ ನಡೆಸಿದರೆ ತಮಗೆ ಅನಾನುಕೂಲವಾಗದಷ್ಟೇ?" ಎಂದಾಗ ಅವರು